# ಕನ್ನಡತಿ ಸೋನು ವೇಣುಗೋಪಾಲ್



ಮೂಲತಃ ಬೆಳಗಾವಿಯ ಸೋನು ವೇಣುಗೋಪಾಲ್ ಈಗ ರೇಡಿಯೊ ಜಾಕಿಯೊಂದಿಗೆ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಕೂಡ. ಕನ್ನಡದಲ್ಲಿ ಸ್ಟ್ಯಾಂಡ್ ಅಪ್ ಕಾಮಿಡಿ ಮಾಡುತ್ತಿರುವ ಸೋನು ಬೆಳೆದಿದ್ದು ದೆಹಲಿಯಲ್ಲಿ. ಗುಜರಾತ್ ಯೂನಿವರ್ಸಿಟಿಯಲ್ಲಿ ಪದವಿ. ದೆಹಲಿಯಲ್ಲಿ ಬೆಳೆದ ಇವರು ಕನ್ನಡ ಬೆಂಗಾಲಿ, ಮರಾಠಿ, ಹಿಂದಿ, ಗುಜರಾತಿ, ತೆಲುಗು, ಇಂಗ್ಲಿಷನ್ನು ಸರಾಗವಾಗಿ ಮಾತನಾಡಬಲ್ಲರು. ಅಧ್ಯಾಪಕಿಯಾಗಿದ್ದರು. ನಂತರ ಫೀವರ್ 104 ಎಫ್.ಎಮ್. ರೇಡಿಯೊದಲ್ಲಿ ಎರಡು ವರ್ಷ ಕಾರ್ಯಕ್ರಮ ನಿರ್ಮಾಪಕಿಯಾಗಿ ಕಾರ್ಯನಿರ್ವಹಿಸಿ ಆ ನಂತರ ಅಲ್ಲೆ ರೇಡಿಯೊ ಜಾಕಿಯಾಗಿ ಕೆಲಸ ಮಾಡಿದ್ದಾರೆ. ಆದಾದ ಮೇಲೆ ರೇಡಿಯೊ ಸಿಟಿ 91.5 ಎಫ್.ಎಮ್.ನ ಐತಲಕಡಿ' ಮಾರ್ನಿಂಗ್ ಶೋ ನಡೆಸಿಕೊಡುತ್ತಿದ್ದರು. ನಂತರ 91.1 ಎಫ್.ಎಮ್.ನಲ್ಲಿ ಸಂಜೆ 'ಸಿಟಿ ಮಾತು' ಕಾರ್ಯಕ್ರಮ. ಈ ಮಧ್ಯದಲ್ಲಿ ಸೋನುಗೆ ಪ್ರಖ್ಯಾತಿ ತಂದುಕೊಟ್ಟಿದ್ದು ಯೂ ಟ್ಯೂಬ್ ಸಿರೀಸ್ 'ಬಾಜು ಮನಿ ಕಾಕು' (ಪಕ್ಕದ ಮನೆ ಆಂಟಿ) ಆಕೆಯ ಫೇಸ್‌ಬುಕ್ ಪೇಜ್‌ನಲ್ಲಿ ಕೂಡ ಈ ಸಿರೀಸ್ ಇದೆ. ಉತ್ತರ ಕರ್ನಾಟಕದ ಭಾಷೆಯಲ್ಲಿ ಮೂಡಿಬಂದ ಈ ಸಿರೀಸ್ ತುಂಬ ಹಾಸ್ಯಯುತವಾಗಿದೆ. ಆ ನಂತರ ಸೋನು ಸ್ಟ್ಯಾಂಡ್ ಅಫ್ ಕಾಮಿಡಿಯನ್ನು ಆರಂಭಿಸಿದರು. ಈಗ 'ಗಾಂಧಿ ಕ್ಲಾಸ್ ಕಾಮಿಡಿ' ತಂಡದಲ್ಲಿ ಒಬ್ಬರು.

ಅವರ ಮೆಟ್ರೊ ಮತ್ತು ಮಹಿಳೆಯರ ಸ್ಟ್ಯಾಂಡ್ ಅಪ್ ಕಾಮಿಡಿ ಮಾತಿನ ಝಲಕ್ ಹೀಗಿದೆ ನೋಡಿ:

ಹೆಣ್ಮಕ್ಕಿಗ ಶಬರಿಮಲೆಗೆ ಹೋಗ್ಬೇಡಿ ಅಂತಾರ. ಅದಕ್ ಪರಿಹಾರಾಗಿ ಮೆಟ್ರೋದಾಗ ಮಹಿಳೆಯರಿಗ್ ಮೀಸಲಿಟ್ಟ ಕೋಚ್‌ಗೂ ಹೋಗ್ಬಹುದು, ಕಾಮನ್ ಕೋಚ್‌ಗೂ ಹೋಗ್ ಬಹುದು. ಎಲ್ ಬೇಕಂದ್ರ ಅಲ್ಲಿ ಹೋಗ್ರಿ ಅಂತ್ ಇಟ್ ಬಿಟ್ಟಾರ!. ಮೆಟ್ರೊದಾಗ ಮಹಿಳೆಯರ

## ಸಾದಿಯಾ ಅಲಿ

ನಟಿ, ಕಾಮಿಡಿಯನ್ ಸಾದಿಯಾ ಅಲಿ ಮೂಲತಃ ತಮಿಳುನಾಡಿನವರು. ತಂದೆ ಬೆಂಗಾಲಿ. ತನ್ನ ಧರ್ಮದ ಹೆಸರಲ್ಲಿ ನಡೆಯುವ ಕಂದಾಚಾರ, ಮಹಿಳೆಯರ ಮೇಲಿನ ನಿರ್ಬಂಧ, ಹಿಂದೂಗಳು ಮುಸ್ಲಿಂಮರನ್ನು ನೋಡುವ ರೀತಿ ಸೇರಿದಂತೆ ಇವಳ ಹಾಸ್ಯದ ತಪರಾಕಿಗೆ ಸಿಕ್ಕದ ವಿಷಯಗಳೇ ಇಲ್ಲ. ಟಿ. ಎಲ್. ಸಿ. 'ಕ್ವೀನ್ಸ್ ಆಫ್ ಕಾಮಿಡಿ' ಮೂಲಕ ಕಾಮಿಡಿ ವೃತ್ತಿಯನ್ನು ಆರಂಭಿಸಿದ ಸಾದಿಯಾ, 'ಕ್ವೀನ್ಸ್ / ಕಿಂಗ್ಸ್'ನಲ್ಲೂ ಸ್ಪರ್ಧಿ ಆಗಿದ್ದವರು.

'ಟ್ರೋಲಿಂಗ್ ನಮ್ಮ ನ್ಯಾಶನಲ್ ಟೈಂ ಪಾಸ್. ಅದು ನ್ಯಾಷನಲ್ ಸ್ಪೋರ್ಟ್ಸ್ ಕೂಡ ಆಗ್ಬೇಕು. ಹಾಗಂತ ಕ್ರಿಕೆಟ್‌ನ ಎರಡನೇ ಸ್ಥಾನದಲ್ಲಿ ಇಟ್ಟರೆ ದೇಶದ್ರೋಹಿ ಪಟ್ಟ ಪಕ್ಕಾ' ಎಂದು ಹಾಸ್ಯ ಉಕ್ಕಿಸುತ್ತಲೇ ಮಾಧ್ಯಮಗಳು ಕಳೆದುಕೊಂಡಿರುವ ಸುದ್ದಿಸೂಕ್ಷ್ಮಗಳ ಕುರಿತು ಚಾಟಿ ಬೀಸುತ್ತಾರೆ.

ನಟಿಯೂ ಆಗಿರುವ ಸಾದಿಯಾ ಅವರು, 'ಈಗ ಕಾಸ್ಟಿಂಗ್ ಕೌಚ್ ಕಾಂಪ್ರೊಮೈಸ್ ರೌಂಡಿಗೆ ಹೊಂದಿಕೊಂಡ್ರೆ ಹೀರೋಯಿನ್ ಆಗಿಬಿಡಬಹುದು. ನಾನು ಯಾವಾಗ್ಲೂ ಅದರಲ್ಲಿ ಸೋಲೋದು' ಎಂದು ಬಣ್ಣದ ಲೋಕದ ಬಣ್ಣಗೆಟ್ಟ ಮುಖವನ್ನೂ ಪರಿಚಯಿಸುತ್ತಾರೆ.

bit.ly/3e8bv3F
bit.ly/2VlqJdg




## ಸೇಜಲ್ ಭಟ್

'ಕಾಮಿಕ್ ಸ್ತಾನ್'ದ 10 ಫೈನಲಿಸ್ಟ್‌ಗಳಲ್ಲಿ ಸೇಜಲ್ ಭಟ್ ಒಬ್ಬಳು. ಕಾಶ್ಮೀರಿ ಪಂಡಿತ್ ಕುಟುಂಬಕ್ಕೆ ಸೇರಿದ ಸೇಜಲ್, 'ಅಯ್ಯೋ, ಕಾಶ್ಮೀರಿ ಪಂಡಿತರನ್ನ ಮುಸ್ಲಿಮರು ಹಂಗೆ ಓಡಿಸಿದ್ರು, ಹಿಂಗೆ ಓಡಿಸಿದ್ರು' ಎಂದು ರಾಗ ಎಳೆಯುವವರನ್ನು ಕುರಿತು ಒಂದಿಷ್ಟು ಜೋಕ್ ಮಾಡ್ತಾರೆ.

ಬಾಲಿವುಡ್ ಸಿನಿಮಾಗಳು ಮುಸ್ಲಿಂ ಪ್ರಧಾನ ಸಿನೆಮಾ ಮಾಡಿದ್ರೆ, 'ತಪ್ಪಡ್ ಸೆ ಡರ್ ನಹಿ ಲಗತಾ ಹೈ ಪ್ಯಾರ್ ಸೆ ಡರ್ ಲಗತಾ ಹೈ...' ಎಂಬ ಖ್ಯಾತ ಡೈಲಾಗ್ ಬದಲಿಗೆ, 'ತಪ್ಪಡ್ ಸೆ ಡರ್ ನಹಿ ಲಗತಾ ಹೈ, ತ್ರಿವಳಿ ತಲಾಖ್ ಸೆ ಡರ್ ಲಗತಾ ಹೈ' ಎಂದು ಬದಲಾಗ್ತಿತ್ತು. 'ಚೋಲಿಕೆ ಪೀಚೆ ಕ್ಯಾ ಹೈ?' ಎನ್ನುವ ಬದಲಿಗೆ, 'ಬುರ್ಕಾ ಕೆ ನೀಚೆ ಕ್ಯಾ ಹೈ?' ಹಾಡು ಬಂದಿರುತ್ತಿತ್ತು ಎಂದು ಚಟಾಕಿ ಹಾರಿಸುವ ಅವರ ಹಾಸ್ಯರಸದೌತಣವನ್ನು ನೋಡಿಯೇ ಸವಿಯಬೇಕು.

youtu.be/7kvbD2swZV0
youtu.be/DKcKr8Kkj6Q

